

ಕ್ರಿಯಾತ್ಮಕ ಚಿಂತನೆಯನ್ನು ಕುವೆಂಪು ಅವರು ಕಟ್ಟಿಕೊಟ್ಟಿದ್ದಾರೆ. 'ಕ್ರಿಯಾತ್ಮಕ ಚಿಂತನೆ' ಎಂದು ನಾನು ಕರೆಯಲು ಕಾರಣವಿದೆ. ಕುವೆಂಪು ಅವರು ಸಮಸ್ಯೆಗಳನ್ನು ಪರಿಶೀಲಿಸುವುದಷ್ಟೇ ಅಲ್ಲ, ಪರಿಹಾರಕ್ಕಾಗಿ ನಡೆಸಬೇಕಾದ ಕ್ರಿಯಾವಿಧಾನವನ್ನೂ ಸೂಚಿಸುತ್ತಾರೆ. ಇವರ ಬರಹ ಮತ್ತು ಭಾಷಣಗಳಲ್ಲಿ ಈ ಅಂಶ ಸ್ಪಷ್ಟವಾಗಿ ಅಂತರ್ಗತವಾಗಿದೆ. ಈ ದೃಷ್ಟಿಯಿಂದ ಕುವೆಂಪು ಅವರು ಒಬ್ಬ 'ಸಾಮಾಜಿಕ ಕ್ರಿಯಾಕರ್ತರೂ' (Social Activist) ಆಗಿದ್ದಾರೆ. ನಿಜ; ಅವರು ಹೋರಾಟಗಾರರಂತೆ ಬೀದಿಗೆ ಬಂದು ಘೋಷಣೆ ಕೂಗಲಿಲ್ಲ. ಆದರೆ ಹೋರಾಟಗಾರರಿಗೆ ಬೇಕಾದ ಅರಿವು ಮತ್ತು ಹಾದಿ – ಎರಡನ್ನೂ ತೋರಿದ್ದಾರೆ. ಹೀಗಾಗಿ ಅವರ ವಿಚಾರಧಾರೆಗೆ ಸಾಮಾಜಿಕ ಕ್ರಿಯಾಶೀಲತ್ವದ (Social Activism) ಆಯಾಮ ತಾನಾಗಿ ಒದಗಿಬಂದಿದೆ.

ನಾವಿಂದು ಧಾರ್ಮಿಕ ಮೂಲಭೂತವಾದವನ್ನು ವಿರೋಧಿಸುವಾಗ ದೇವರ ಅಸ್ತಿತ್ವದ ಪ್ರಶ್ನೆಗಿಂತ, ದೇವರು–ಧರ್ಮಗಳ ದುರುಪಯೋಗದ ಬಗ್ಗೆ ಮಾತನಾಡುವ ಸನ್ನಿವೇಶದಲ್ಲಿದ್ದೇವೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಆಧ್ಯಾತ್ಮಿಕ ಚಿಂತನೆ ಹೆಚ್ಚು ಉಪಯುಕ್ತವಾಗುತ್ತದೆ. ಅವರು 'ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ ಕೊಚ್ಚಿ ಹೋಗಲಿ; ಬರಲಿ ವಿಜ್ಞಾನ ಬುದ್ಧಿ' ಎಂದು ಆಶಿಸಿದ್ದಾರೆ. 'ಮತದಿಂದ (ಮತಧರ್ಮದಿಂದ) ಪಾರಾಗು, ಅಧ್ಯಾತ್ಮಕ್ಕೆ ಶರಣಾಗು, ಮೌಢ್ಯಕ್ಕೆ ದೂರಾಗು; ವಿಜ್ಞಾನ ಮತಿಯಾಗು' ಎಂದು ಕರೆಕೊಟ್ಟಿದ್ದಾರೆ. ಹೀಗೆ ಆಧ್ಯಾತ್ಮಿಕತೆ ಮತ್ತು ಮತಧರ್ಮ ದೂರವಾದ ವೈಚಾರಿಕತೆಗಳನ್ನು ಒಂದಾಗಿಸಿ ತಮ್ಮ ಸೈದ್ಧಾಂತಿಕತೆಯನ್ನು ರೂಪಿಸಿದ್ದಾರೆ; ತಮ್ಮ ವೈಚಾರಿಕ ಬರಹಗಳಲ್ಲಷ್ಟೇ ಅಲ್ಲ, 'ಜಲಗಾರ', 'ಶೂದ್ರತಪಸ್ವಿ'ಯಂತಹ ಕೃತಿಗಳಲ್ಲೂ ಅಧ್ಯಾತ್ಮವನ್ನು ಸಾಂಸ್ಥಿಕ ಧರ್ಮದ ಜಡತ್ವ ಹಾಗೂ ಅಸಮಾನತೆಯ ಅಂಶದಿಂದ ದೂರ ಕೊಂಡೊಯ್ದು ಸಾಮಾಜಿಕ ಆಯಾಮವನ್ನು ನೀಡಿದ್ದಾರೆ.

'ಶೂದ್ರ ತಪಸ್ವಿ' ನಾಟಕವು ಇಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬರಿಗೂ ಜಾತಿ–ಧರ್ಮಗಳನ್ನು ಮೀರಿದ ತಪಸ್ಸಿನ ಹಕ್ಕು ಇದೆ ಎಂದು ಧ್ವನಿಸುತ್ತದೆ. ನಮ್ಮಲ್ಲಿರುವ ಜಾತಿ ಮತ್ತು ವರ್ಣ ವ್ಯವಸ್ಥೆಯ ಕಾರಣದಿಂದ ಬ್ರಾಹ್ಮಣ ಮತ್ತು ಶೂದ್ರ – ಎಂಬ ಪದಗಳನ್ನು ಬಳಸಿದ್ದರೂ ಇದು 'ಬ್ರಾಹ್ಮಣ ದ್ವೇಷಿ ಕೃತಿಯಲ್ಲವೆಂದು ಮರುಮುದ್ರಣದ ಮಾತುಗಳಲ್ಲಿ ವಿವರಿಸಿದ್ದಾರೆ. ವಿರೋಧಿಸಿದವರು ಮತ್ತು ಸಮರ್ಥಿಸಿದವರು ಇಬ್ಬರೂ ಈ ಕೃತಿಯನ್ನು